**ಸಿ.ಸಿ.33/2018**

ಸಿ.ಡಬ್ಲು-೧ ಪಿ.ಡಬ್ಲು-೧

**ಪಾಟೀ ಸವಾಲು ಆರೋಪಿರ ಪರ ಶ್ರೀ ಎಸ್.ಎಸ್.ಸಿ. ವಕೀಲರಿಂದಃ**

ನನ್ನ ಜಮೀನು ಸ.ನಂ. ೮೬/೩ ಕಡಗಂಚಿ ಗ್ರಾಮದಲ್ಲಿ ಆಳಂದ ರಸ್ತೆಗೆ ಇರುತ್ತದೆ. ಅಪಘಾತದಲ್ಲಿ ಇಬ್ಬರು ಸಹೋದರರು ತೀರಿಕೊಂಡರು ಎಂದು ಹೇಳುತ್ತಿರಲ್ಲಾ, ಅವರಿಗೆ ವಾಹನ ಚಾಲನಾ ಪತ್ರ ಇತ್ತಾ ಎಂದರೆ, ಸಾಕ್ಷಿಯು ಶ್ರೀಶೈಲ ಎನ್ನುವವರಿಗೆ ಇತ್ತು ಎಂದು ಹೇಳುತ್ತಾರೆ. ಫಿರ್ಯಾದಿಯ ಕಾಲಕ್ಕೆ ನಾನು ನನ್ನ ಸಹೋದರನ ಚಾಲನಾ ಪರವಾನಿಗೆ ಪತ್ರವನ್ನು ನೀಡಿರುವುದಿಲ್ಲ. ಕಡಗಂಚಿ ಬಸ್ ನಿಲ್ದಾಣದಿಂದ ಎನ್.ಡಿ. ಪೆಟ್ರೋಲ್ ಬಂಕ್ ಸುಮಾರು ೧ ಕಿ.ಮೀ. ಅಂತರ ಇದೆ. ಕಡಗಂಚಿ ಮತ್ತು ಆಳಂದ ರಸ್ತೆಯು ಡಬಲ್ ರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಎದುರಿನಿಂದ ಬರುವ ವಾಹನ ಮತ್ತು ಆ ಕಡೆಯ ವಾಹನ ಸರಳವಾಗಿ ಹೋಗುತ್ತವೆ ಎಂದರೆ ಸರಿ. ಎನ್.ಡಿ. ಪೆಟ್ರೋಲ್ ಬಂಕ್ / ಘಟನಾ ಸ್ಥಳದ ಹತ್ತಿರ ಒಂದು ಪೂಲ್ ಇದೆ ಎಂದರೆ ಸರಿ. ಸದರಿ ಪೂಲ್ ಮತ್ತು ಪೆಟ್ರೋಲ್ ಬಂಕ್ ಇರುವುದರಿಂದ ಸಾಮಾನ್ಯವಾಗಿ ವಾಹನಗಳು ನಿಧಾನವಾಗಿಯೇ ಚಲಿಸುತ್ತವೆ ಎಂದರೆ ಸರಿ.

ನಾಗಣ್ಣ ಪಾಳೆ ನಮ್ಮ ಊರಿನವರು ಇರುತ್ತಾರೆ. ಘಟನಾ ಸ್ಥಳಕ್ಕೆ ಹೋಗುವ ದಾರಿಯಲ್ಲಿ ನಾಗಣ್ಣನವರ ಜಮೀನು ಇರುವುದಿಲ್ಲ ಎಂಧರೆ ಸರಿ. ಘಟನಾ ಸ್ಥಳಕ್ಕೂ ಮತ್ತು ಎನ್.ಡಿ. ಪೆಟ್ರೋಲ್ ಬಂಕಿಗೂ ಎಷ್ಟು ಅಂತರವಿರುತ್ತದೆ ಎಂದರೆ ಸಾಕ್ಷಿಯು ೩೦೦ ಮೀಟರ್ ಅಂತರವಿರುತ್ತದೆ ಎಂದು ನುಡಿಯುತ್ತಾರೆ. ಘಟನಾ ಸ್ಥಳವು ಎನ್.ಡಿ. ಪೆಟ್ರೋಲ್ ಬಂಕಿನ ಪಶ್ಚಿಮ ದಿಕ್ಕಿನ ಕಡೆ ಇರುತ್ತದೆ. ಆಳಂದ ಮತ್ತು ಕಡಗಂಚಿ ರಸ್ತೆ ಉತ್ತರ ದಕ್ಷಿಣಾಭಿಮುಖವಾಗಿ ಇರುತ್ತವೆ. ಘಟನಾ ಸ್ಥಳ ಪೂರ್ವ ದಿಕ್ಕಿಗೆ ಬರುತ್ತದೆ ಎಂದರೆ ಸರಿ ಅಲ್ಲ. ಅಪಘಾತದಲ್ಲಿ ಶ್ರೀಶೈಲ ಸ್ಥಳದಲ್ಲಿಯೇ ಮೃತರಾಗಿರುತ್ತಾರೆ. ಅವನ

ಅಂತ್ಯಸಂಸ್ಕಾರವನ್ನು ಘಟನಾ ನಡೆದ ದಿನದಂದೇ ಮಾಡಿರುತ್ತೇವೆ. ಶಿವಾನಂದನನ್ನು ಆಸ್ಪತ್ರೆಗೆ ದಾಖಲು ಮಾಡಿರುತ್ತೇವೆ, ಅವನ ಜೊತೆ ನಾನು ಇದ್ದೆ. ನಾನು ಅವನು ಮರಣ ಹೊಂದುವವರೆಗೂ ಆಸ್ಪತ್ರೆಯಲ್ಲಿ ಇದ್ದೆ. ಕರಬಸಪ್ಪ ತಂದೆ ಶಾಂತಪ್ಪ ಕ್ಯಾರ ನಮ್ಮ ಊರಿನವರು. ಅವರು ಕಲಬುರಗಿಯಲ್ಲಿ ವಕೀಲ ವೃತ್ತಿಯನ್ನು ಮಾಡುತ್ತಾರೆ ಎಂಧರೆ ಸರಿ. ಫಿರ್ಯಾದಿಯನ್ನು ಚಾಸಾ-೧೫ ರವರೇ ಬರೆದಿರುತ್ತಾರೆ ಎಂದರೆ ಸರಿ. ಚಾಸಾ-೧೫ ರವರು ಅವರಿಗೆ ಹೇಗೆ ಬೇಕೋ ಹಾಗೆ ಫಿರ್ಯಾದಿಯನ್ನು ಬರೆದಿದ್ದಾರೆ ಎಂದರೆ ಸರಿ ಅಲ್ಲ, ಸಾಕ್ಷಿಯು ನಾನು ಹೇಳಿದ ಹಾಗೆ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಅಪಘಾತಕ್ಕೆ ಒಳಪಟ್ಟ ಕಾರು ಸಹ ಪಲ್ಟಿ ಆಗಿತ್ತು ಎಂಧರೆ ಸರಿ. ಕಾರು ಪಲ್ಟಿಯಾಗಿ ರಸ್ತೆಯ ಪಶ್ಚಿಮ ದಿಕ್ಕಿಗೆ ಬಿದ್ದಿತ್ತು. ಸದರಿ ಅಪಘಾತದಲ್ಲಿ ಆರೋಪಿಗೂ ಗಾಯವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ತಮ್ಮಂದಿರು ಚಲಾಯಿಸುತ್ತಿದ್ದ ಮೋಟರ ಸೈಕಲ್ ಸಹ ಪಶ್ಚಿಮ ದಿಕ್ಕಿಗೆ ಬಿದ್ದಿತ್ತು. ಪೋಲಿಸರು ನನ್ನನ್ನು ದಿಃ ೧೪.೦೫.೨೦೧೭, ದಿಃ ೧೨.೦೫.೨೦೧೭ ರಂದು ಕರೆಯಿಸಿ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ, ಏತಕ್ಕಾಗಿ ಕರೆಸಿದ್ದರು ಎಂದರೆ, ಸಾಕ್ಷಿಯು ಘಟನಾ ವಿಷಯದ ಬಗ್ಗೆ ಕೇಳಲು ಕರೆಸಿದ್ದರು ಎಂದು ನುಡಿಯುತ್ತಾರೆ.

ಪೋಲಿಸರು ಠಾಣೆಗೆ ನನ್ನನ್ನು ಕರೆಸಿ ಆರೋಪಿಯನ್ನು ತೋರಿಸಿದಾಗ ಅಲ್ಲಿ ೪-೫ ಇದ್ದರು, ಪೋಲಿಸರೇ ನನಗೆ ಆರೋಪಿಯನ್ನು ತೋರಿಸಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಆರೋಪಿ ವಾಹನವನ್ನು ನಿಧಾನವಾಗಿ ಚಲಾಯಿಸುತ್ತಿದ್ದನು ಎಂದರೆ ಸರಿ ಅಲ್ಲ. ಆರೋಪಿ ತನ್ನ ವಾಹನವನ್ನು ಆಳಂದದಿಂದ ಗುಲಬರ್ಗಾ ಕಡೆಗೆ ನಿಧಾನವಾಗಿ ಚಲಾಯಿಸಿಕೊಂಡು ಹೋಗುತ್ತಿರುವಾಗ, ಎದುರಿಗೆ ಒಂದು ಲಾರಿ ಬರುತ್ತಿತ್ತು ಅದನ್ನು ಓವರಟೇಕ್ ಮಾಡಲು ನಿನ್ನ ಸಹೋದರರು ಅತಿ ಜೋರಾಗಿ ನಿರ್ಲಕ್ಷತನದಿಂದ ವಾಹನವನ್ನು ಓಡಿಸಿ ಕಾರಿಗೆ ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿ ಅಲ್ಲ. ಸಾಕ್ಷಿ ಮುಂದುವರೆದು ಆರೋಪಿಯೇ ಓವರಟೇಕ್ ಮಾಡಿ ಅಪಘಾತಪಡಿಸಿರುತ್ತಾನೆ ಎಂದು ನುಡಿಯುತ್ತಾರೆ. ಆರೋಪಿ ತನ್ನ ವಾಹನವನ್ನು ಅಪಘಾತವಾಗುತ್ತದೆ ಎಂದು ತಿಳಿದು ತಪ್ಪಿಸಲು ಎಡಕಿನ ಬಾಜು ತೆಗೆದುಕೊಂಡಾಗ ಅವನ ವಾಹನವು ರೋಡಿನ ಕೆಳಗಿನ ಬಾಜು ಪಲ್ಟಿಯಾಗಿರುತ್ತದೆ ಎಂದರೆ ಸರಿ ಅಲ್ಲ. ನಿನ್ನ ಸಹೋದರರು ಅತಿ ಜೋರಾಗಿ ನಿರ್ಲಕ್ಷತನದಿಂದ ವಾಹನವನ್ನು ಓಡಿಸಿಕೊಂಡು ಬಂದು ಕಾರಿನ ಬಲಕಿನ ಮುಂದಿನ ಬಾಜು ಅಪಘಾತ ಪಡಿಸಿರುತ್ತಾರೆ ಎಂದರೆ ಸರಿ ಅಲ್ಲ. ನಿನ್ನ ಸಹೋದರನು ಓಡಿಸಿಕೊಂಡು ಬಂದ ಮೋಟರ ಸೈಕಲಗೆ ಯಾವುದೇ ಕಾಗದ ಪತ್ರಗಳು ಇರಲಿಲ್ಲ ಎಂದರೆ ಸರಿ ಅಲ್ಲ, ಅವುಗಳನ್ನು ತನಿಖಾಧಿಕಾರಿಗೆ ನೀಡಿರುತ್ತೀರಾ ಎಂದರೆ, ಸಾಕ್ಷಿಯು ನೀಡಿರುತ್ತೇನೆ ಎಂದು ನುಡಿಯುತ್ತಾರೆ.

ಆರೋಪಿಯ ವಾಹನದ ದಾಖಲೆಗಳು ಸರಿಯಾಗಿದ್ದ ಕಾರಣ ನಿಮಗೆ ಪರಿಹಾರ ಸಿಗಬೇಕೆಂಬ ಉದ್ದೇಶದಿಂದ ಖೊಟ್ಟಿ ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಆರೋಪಿ ವಾಹನವನ್ನು ನಿಷ್ಕಾಳಜಿ ಮತ್ತು ನಿರ್ಲಕ್ಷತನದಿಂದ ವಾಹನವನ್ನು ಓಡಿಸುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆರೋಪಿ ತನ್ನ ವಾಹನವನ್ನು ರಸ್ತೆಯ ಎಡಬದಿಗೆ ನಿಧಾನವಾಗಿ ಚಲಿಸಿಕೊಂಡು ಹೋಗುತ್ತಿದ್ದನು ಎಂಧರೆ ಸರಿ ಅಲ್ಲ. ಈ ಘಟನೆಯಲ್ಲಿ ಆರೋಪಿಯದ್ದು ಯಾವುದೇ ತಪ್ಪು ಇಲ್ಲ ಎಂದರೆ ಸರಿ ಅಲ್ಲ. ನಾಗಣ್ಣ ಬಾಳಿ ಅವರು ಘಟನೆ ನಡೆದ ಸ್ಥಳದಲ್ಲಿ ಇದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಪರಿಹಾರಧನದ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಸಿ.ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.